ನಇರಂ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ನಮ್ಮ ಪ್ರದೇಶದಲ್ಲಿ ಒಡ್ಡನ್ನು ಹಾಕಿದ್ದಾರೆ. ೨–೩ ಕೆರೆಗಳಿಗೆ ಬರುವ ನೀರು ತಪ್ಪುತ್ತಿದೆ ಎಂದು ವರದಿ ಮಾಡಿದ್ದಾರೆ. ಇದು ಅಕ್ರಮ ಎಂಬುದು ನಿರ್ವಿವಾದ. ಈ ದಿಸೆಯಲ್ಲಿ ಪತ್ರಿಕೆಯಲ್ಲಿ ನೋಡಿರಬಹುದು, ತುಮಕೂರು ಜಿಲ್ಲಾಧಿಕಾರಿಗಳು ಆಜ್ಞೆ ಹೊರಡಿಸಿ ಅದನ್ನು ಮುಚ್ಚಬೇಕೆಂದು ಸರ್ಕಾರದ ನಿರ್ದೇಶನದ ಮೇರೆಗೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಆ ಒಡ್ಡನ್ನು ಮುಚ್ಚುತಕ್ಕ ಕೆಲಸ ನಿನ್ನೆಯಿಂದ ಭರದಿಂದ ಸಾಗುತ್ತಿದೆ ಎಂದು ಸಭೆಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಅವರ ಉತ್ತರದಲ್ಲಿ ಹೇಳಿದ್ದಾರೆ, ನಾವು ಆಂಧ್ರ ಸರ್ಕಾರಕ್ಕೆ ಕಾಗದ ಬರೆದಿದ್ದೇವೆ ಎಂದು.

ಅಧ್ಯಕ್ಷರು.—ಒಡ್ಡನ್ನು ಮುಚ್ಚುತಕ್ಕ ಕೆಲಸ ನಿನ್ನೆಯಿಂದ ಭರದಿಂದ ಸಾಗುತ್ತಿದೆ ಎಂದು ಈಗ ಹೇಳುತ್ತಿದ್ದಾರಲ್ಲ.

ಶ್ರೀ ಕೆ. ಲಕ್ಕಪ್ಪ —ಎಚ್ಚರಿಕೆ ಕೊಟ್ಟು ಕಾಗದ ಬರೆದಿದ್ದೇವೆಂದು ಹೇಳಿದ್ದಾರೆ. ಆ ಕಾಗದದಲ್ಲಿ ಏನು ಬರೆದಿದ್ದಾರೆಂಬುದನ್ನು ಸಭೆಯ ಗಮನಕ್ಕೆ ತರಬೇಕು. ಖಾರವಾಗಿ ಬರೆದಿದ್ದಾರೆಯೆ ? ಅಥವಾ ಹೇಗೆ ವ್ಯಾಖ್ಯಾನ ಮಾಡಿದ್ದಾರೆಂಬುದು ಬೇಕು. ಇಂಥ ಪರಿಸ್ಥಿತಿಯಲ್ಲಿ ಆಂಧ್ರ ಪ್ರದೇಶಕ್ಕೆ ಸರಿಯಾದ ರೀತಿಯಲ್ಲಿ ಜವಾಬು ಕೊಡಬೇಕಾಗುತ್ತದೆ. ಎಲ್ಲಾ ಕಡೆ ಧಾಳಿ ನಡೆಸುವುದಕ್ಕೆ ಬಾರ್ಡರ್‌ನಲ್ಲಿ ಪ್ರಯತ್ನ ನಡೆಯುತ್ತಿದೆ. ಈ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕು. The Executive Engineer, Madhugiri Sub–division has not taken any action. Why has he not taken any action ? After the matter appeared in the Press, he has initiated action. I want to know what action the Government is going to take against that Executive Engineer. Why have they not reported the matter to the Government ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸ್ವಾಮಿ, ಸದಸ್ಯರು ಕೊಟ್ಟಂಥ ಸಲಹೆಯನ್ನು ನಾವು ಪರಿಶೀಲಿಸುತ್ತೇವೆ. ಅಧಿಕಾರಿಗಳ ನಿರ್ಲಕ್ಷ್ಯತೆಗೆ ಕ್ರಮ ತೆಗೆದುಕೊಳ್ಳುವುದರಲ್ಲಿ ನಾವು ಹಿಂಜರಿಯುವುದಿಲ್ಲ ಎಂದು ತಿಳಿಸುತ್ತಾ ಆಂಧ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರತಿಭಟನಾ ಪತ್ರವನ್ನು ಈ ಸಭೆಗೆ ಕೊಡಬೇಕೆಂದು ಕೇಳಿದ್ದಾರೆ. ಅದನ್ನು ಮಾನ್ಯ ಸದಸ್ಯರಿಗೆ ತೋರಿಸುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ತೋರಿಸುವುದಲ್ಲ. ಇದು ಬಹಳ ಮುಖ್ಯವಾದ ಪ್ರಶ್ನೆ. ಆ ಕಡೆಗಳಲ್ಲಿ ಗಡಿ ಸಮಸ್ಯೆ ಉದ್ಭವವಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ: ಇರಿಗೇಷನ್ ಆಕ್ಟ್ ಮತ್ತು ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ನೀರನ್ನು ಅಕ್ರಮವಾಗಿ ಬೇರೆ ಕಡೆ ಡೈವರ್ಟ್ ಮಾಡಿದರೆ ಕಾನೂನು ಪ್ರಕಾರ ತಪ್ಪಾಗುವುದಿಲ್ಲವೇ ? ತಪ್ಪಾದರೆ ಈಗಲಾದರೂ ಸರ್ಕಾರವೇ ಮಾಡಿರಲಿ ಖಾಸಗಿಯವರೇ ಮಾಡಿರಲಿ ಅದು ಕ್ರಿಮಿನಲ್ ಆಫೆನ್ಸ್ ಆಗುವುದರಿಂದ ಪೋಲೀಸ್ ಕಂಪ್ಲೇಂಟ್ ಕೊಟ್ಟು ಅವರನ್ನು ಕೋರ್ಟಿಗೆ ಎಳೆಯುತಕ್ಕ ಪ್ರಯತ್ನ ಸರ್ಕಾರ ಮಾಡುತ್ತದೆಯೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅದನ್ನು ಪರಿಶೀಲಿಸಲಾಗುತ್ತದೆ.

ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ನಿಟ್ಟೂರ (ಬಿ) ಗ್ರಾಮದ ಹತ್ತಿರ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಇರುವ ಬ್ರಿಡ್ಜನ್ನು ಅಗಲಗೊಳಿಸುವ ಬಗ್ಗೆ

೨೬೧. ಶ್ರೀ ವಿಜಯಕುಮಾರ್ ಖಂಡ್ರೆ (ಭಾಲ್ಕಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ನಿಟ್ಟೂರ (ಬಿ) ಗ್ರಾಮದ ಹತ್ತಿರ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಇರುವ ಬ್ಯಾರೇಜ್ ಕಮ್ ಬ್ರಿಡ್ಜನ್ನು ಅಗಲಗೊಳಿಸುವ ಕಾರ್ಯವನ್ನು ಮಂಜೂರು ಮಾಡುವ ಕುರಿತು ಸರಕಾರಕ್ಕೆ ಮನವಿ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕೆಲಸವನ್ನು ಮಂಜೂರು ಮಾಡಲು ಮತ್ತು ಶೀಘ್ರದಲ್ಲಿ ಪ್ರಾರಂಭಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಈ ಕಾಮಗಾರಿಯನ್ನು ಆಯವ್ಯಯದಲ್ಲಿ ಸೇರಿಸಿ ತೆಗೆದುಕೊಳ್ಳುವುದು ಅವಶ್ಯವೆಂದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ, ಆದರೆ ಲಭ್ಯವಿರುವ ಅನುದಾನವು ಮುಂದುವರೆದ ಕಾಮಗಾರಿಗಳಿಗೆ ಕೂಡಾ ಸಾಕಾಗುವಷ್ಟು ಇಲ್ಲದ ಕಾರಣ ೧೯೯೦-೯೧ನೇ ಸಾಲಿನ ಕರಡು ಆಯವ್ಯಯದಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ಸೂಚಿಸಲಾಗಿಲ್ಲ. ಹಾಗಿದ್ದು ಮುಂದೆ ಆರ್ಥಿಕ ಪರಿಸ್ಥಿತಿ ಸುಧಾರಿಸಿದಲ್ಲಿ ಮತ್ತು ಸಾಕಷ್ಟು ಅನುದಾನ ಲಭ್ಯವಾದಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗುವಂತೆ ಈ ಕಾಮಗಾರಿಯನ್ನು ಎರಡನೇ ಆಧ್ಯತೆಯ ಪಟ್ಟಿಯಲ್ಲಿ ಸೇರಿಸಲಾಗಿದೆ.

ಶ್ರೀ ವಿಜಯಕುಮಾರ್ ಖಿಂಡ್ರೆ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಒಂದು ಮಾತು ಕೇಳಬಯಸುತ್ತೇನೆ. ಈ ಬ್ರಿಡ್ಜ್ ಕಮ್ ಬ್ಯಾರೇಜ್ ಇರುವ ರಸ್ತೆ ಬಹಳ ಮುಖ್ಯವಾದ ರಸ್ತೆ. ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಅಲ್ಲಿ ಓಡಾಡುತ್ತವೆ. ಒಂದು ಸಮಯದಲ್ಲಿ ಒಂದು ಬಸ್ಸು ಮಾತ್ರ ಹೋಗುವುದಕ್ಕೆ ಅಲ್ಲಿ ಸಾಧ್ಯ ಈ ಕೆಲಸ ಬೇಗ ತೆಗೆದುಕೊಳ್ಳದಿದ್ದರೆ ಅಲ್ಲಿ ಆಕ್ಸಿಡೆಂಟ್‌ಗಳಾಗುವ ಸಂಭವ ಇದೆ. ಆದ್ದರಿಂದ ಇದರ ಬಗ್ಗೆ ಗಮನ ಕೊಟ್ಟಿದ್ದೀರಾ ? ಮತ್ತೆ ಮುಂದೆ ಏನು ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೆ. ಈ ಬ್ರಿಡ್ಜ್ ಕಮ್ ಬ್ಯಾರೇಜ್ ಹತ್ತು ಅಡಿ ಆಗಲ ೫೮೫ ಅಡಿ ಉದ್ದ ಇದೆ. ಆಗಲ ಸಂಚಾರಕ್ಕೆ ಸಾಕಾಗುವುದಿಲ್ಲ ಎಂಬುದನ್ನು ನಾವು ಮನಗಂಡಿದ್ದೇವೆ. ಈಗಾಗಲೇ ಹಲವಾರು ಜನ ಶಾಸನಸಭಾ ಸದಸ್ಯರು ಕೂಡ ಅಂದರೆ ಸನ್ಮಾನ್ಯ ಕಲ್ಯಾಣರಾವ್ ಮೊಳಕೇರಿ ಅವರು, ಭೀಮಣ್ಣ ಖಿಂಡ್ರೆಯವರು ಈ ರಸ್ತೆಯನ್ನು ವಿಸ್ತರಣೆ ಮಾಡಿ ಕನಿಷ್ಠಪಕ್ಷ ೨೨ ಅಡಿಗಾದರೂ ಹೆಚ್ಚಿಸಬೇಕೆಂದು ಮನವಿ ಕೊಟ್ಟಿದ್ದಾರೆ. ಆದರ ಬಗ್ಗೆ ಪರಿಶೀಲಿಸಿ ಅಂದಾಜು ಮಾಡಿದ್ದೇವೆ. ಅದಕ್ಕೆ ೩೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆರ್ಥಿಕ ಪರಿಸ್ಥಿತಿಯಿಂದ ಈ ಸಾರಿಯ ಆಯವ್ಯಯದಲ್ಲಿ ಸೇರಿಸುವುದಕ್ಕೆ ಆಗಲಿಲ್ಲ. ಆದ್ದರಿಂದ ಎರಡನೇ ಆಧ್ಯತೆಯ ಪಟ್ಟಿಯಲ್ಲಿ ಸೇರಿಸಿ ಕೆಲಸ ಮಾಡಿಸುವುದಕ್ಕೆ ಆಶ್ವಾಸನೆ ಕೊಡುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿನ ರಸ್ತೆಗಳ ದುರಸ್ತಿ

೧೭೪. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಸರಸಂಬಾ-ಕೋಡಂಗಲ್ ರಸ್ತೆ ಮತ್ತು ಸೇಡಂ-ಯಾದಗಿರಿ ರಸ್ತೆಗಳಲ್ಲಿ ವಾಹನಗಳು ಸಂಚರಿಸಲು ಯೋಗ್ಯವಿಲ್ಲದೆ ದುಸ್ಥಿತಿಯಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ತಿಯನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳೇನು ?

ಇ) ೧೯೮೮-೮೯ ಮತ್ತು ೧೯೮೯-೯೦ರಲ್ಲಿ ಈ ರಸ್ತೆಗಳಿಗೆ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಸರಸಂಬಾ-ಕೋಡಂಗಲ್ ರಸ್ತೆ ಮತ್ತು ಸೇಡಂ-ಯಾದಗಿರಿ ರಸ್ತೆಯು ೧೯೮೮-೮೯ರಲ್ಲಿ ಆಗಿದ್ದ ಅತೀ ಮಳೆಯಿಂದ ಹಾನಿಗೀಡಾದ ವಿಷಯ ಸರಕಾರದ ಗಮನಕ್ಕೆ ಬಂದಿರುತ್ತದೆ.

ಆ) ವಿಶೇಷ ದುರಸ್ತಿ ಹಾಗೂ ಸಾಮಾನ್ಯ ನಿರ್ವಹಣೆಯನ್ನು ತೆಗೆದುಕೊಂಡು ಈ ರಸ್ತೆಗಳ ಕ್ಯಾರೇಜ್ ವೇಯನ್ನು ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಇಡಲಾಗಿದೆ.

ಇ) ಸೇಡಂ ತಾಲ್ಲೂಕಿನಲ್ಲಿಯ ಸರಸಂಬಾ-ಕೋಡಂಗಲ್ ರಸ್ತೆಗೆ ೧೯೮೮-೮೯ನೇ ಸಾಲಿನಲ್ಲಿ ೪,೫೭,೦೨೩-೦೦ ರೂ.ಗಳನ್ನು ಹಾಗೂ ೧೯೮೯-೯೦ನೇ ಸಾಲಿನಲ್ಲಿ ಫೆಬ್ರುವರಿ ಕೊನೆಯವರೆಗೆ ೪,೬೮,೮೮೪-೦೦ ರೂ.ಗಳನ್ನು ಖರ್ಚು ಮಾಡಲಾಗಿದೆ. ಮತ್ತು ಸೇಡಂ-ಯಾದಗಿರಿ ರಸ್ತೆಗೆ ೧೯೮೮-೮೯ನೇ ಸಾಲಿನಲ್ಲಿ ೨ ೧೪,೪೮೯-೦೦ ರೂ.ಗಳನ್ನು ಹಾಗೂ ೧೯೮೯-೯೦ನೇ ಸಾಲಿನಲ್ಲಿ ಫೆಬ್ರುವರಿ ಕೊನೆಯವರೆಗೆ ೨,೯೦,೦೦೨-೦೦ ರೂ.ಗಳನ್ನು ಖರ್ಚು ಮಾಡಲಾಗಿದೆ.